ಕರ್ನಾಟಕ ಸರ್ಕಾರ

# ನೇಕಾರರಿಗೆ 02 ವಿದ್ಯುತ್‌ಮಗ್ಗಗಳನ್ನು ಒದಗಿಸುವ ಯೋಜನೆಯ ಕಾರ್ಯಕ್ರಮ ಅನುಷ್ಠಾನಕ್ಕೆ ಅನುಸರಿಸುವ ಮಾರ್ಗಸೂಚಿ.

ಸರ್ಕಾರದ ಮಾರ್ಗಸೂಚಿ ಸಂಖ್ಯೆ: ವಾಕೈ 58 ಜಕೈಯೋ 2014, ದಿನಾಂಕ: 22.11.2014

******

2011-12 ನೇ ಸಾಲಿನ ಆಯವ್ಯಯದಲ್ಲಿ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳನ್ನು ಒದಗಿಸುವ ಒಂದು ಹೊಸ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ. ಅದರಂತೆ ಪ್ರತಿ ನೇಕಾರರಿಗೆ ತಲಾ 2 ವಿದ್ಯುತ್ ಮಗ್ಗಗಳನ್ನು ಒದಗಿಸಲು ಉದ್ದೇಶಿಸಿದ್ದು, ಇದರಲ್ಲಿ ಪ್ರತಿ ಮಗ್ಗಕ್ಕೆ ರೂ.1,00,000/- ಬೆಲೆಯ ವಿದ್ಯುತ್‌ಚಾಲಿತ ಮಗ್ಗವನ್ನು ಖರೀದಿಸಲು ಸರ್ಕಾರವು ಶೇ.50 ರಷ್ಟು ಗರಿಷ್ಠ ಸಹಾಯಧನ ರೂ.1,00,000/-(ಎರಡು ವಿದ್ಯುತ್ ಮಗ್ಗಗಳಿಗೆ) ನೀಡುವುದರ ಮೂಲಕ ಹೊಸ ಯೋಜನೆಯನ್ನು ಈವರೆಗೆ ಅನುಷ್ಠಾನಗೊಳಿಸಲಾಗಿರುತ್ತದೆ. ಈ ಯೋಜನೆಯನ್ನು ಜವಳಿ ಅಭಿವೃದ್ಧಿ ಆಯುಕ್ತರು ದಿನಾಂಕ:20.08.2011ರಲ್ಲಿ ಹೊರಡಿಸಿರುವ ಮಾರ್ಗಸೂಚಿಯನುಸಾರ ಅನುಷ್ಠಾನ ಮಾಡಲಾಗಿರುತ್ತದೆ.

ಪ್ರಸ್ತುತ 02 ವಿದ್ಯುತ್ ಮಗ್ಗ ಒದಗಿಸುವ ಯೋಜನೆಯ ಘಟಕ ವೆಚ್ಚವನ್ನು ರೂ.2.00 ಲಕ್ಷಗಳಿಂದ ರೂ.3.00 ಲಕ್ಷಗಳಿಗೆ ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಿದ್ದು, ಅದರನ್ವಯ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಮಾರ್ಗಸೂಚಿ ಈ ಕೆಳಕಂಡಂತಿದೆ.

## 1. ಫಲಾನುಭವಿಗಳು:-

- ಕರ್ನಾಟಕ ರಾಜ್ಯದ ನಾಗರೀಕನಾಗಿರಬೇಕು.
- ಫಲಾನುಭವಿಯು ಸ್ವಂತ ಮಗ್ಗ ಹೊಂದಿಲ್ಲದೆ ಕೂಲಿ ಮಗ್ಗದಲ್ಲಿ ಕೆಲಸ ಮಾಡುತ್ತಿರುವವರಾಗಿರಬೇಕು. ಅದರಂತೆ, ದಾಖಲಾತಿ / ಪ್ರಮಾಣಪತ್ರ ಪಡೆದಿರಬೇಕು.
- ಕೈಮಗ್ಗ, ವಿದ್ಯುತ್‌ಮಗ್ಗ ಮತ್ತು ಮಗ್ಗಪೂರ್ವ ಚಟುವಟಿಕೆಗಳಲ್ಲಿ ತೊಡಗಿರುವ ಗ್ರಾಮೀಣ ಮತ್ತು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ನೇಕಾರ ಫಲಾನುಭವಿಗಳು.
- ಫಲಾನುಭವಿಯು ಘಟಕ ಸ್ಥಾಪಿಸಲು ಜಾಗ ಹೊಂದಿರಬೇಕು.

--2

2. ಹಣಕಾಸಿನ ನೆರವು

| ಕ್ರಸಂ | ವಿವರ | ಘಟಕ ವೆಚ್ಚ (02 ಮಗ್ಗಗಳಿಗೆ) | ಸಾಮಾನ್ಯ ಫಲಾನುಭವಿಗಳಿಗೆ ಸಹಾಯಧನ ಶೇ.50 | ಪ.ಜಾ/ಪ. ಪಂ ಫಲಾನುಭವಿಗಳಿಗೆ ಸಹಾಯಧನ ಶೇ.90 |
|---|---|---|---|---|
| 1 | ಸಾಮಾನ್ಯ ವಿದ್ಯುತ್ ಮಗ್ಗ 54" ಅಗಲ, 2ಫಿ1 ಡ್ರಾಪ್ ಬಾಕ್ಸ್ ಹಾಗೂ ಸಲಕರಣೆಗಳೊಂದಿಗೆ. | ರೂ.1,80,000/- | ರೂ.90,000/- | ರೂ.1,62,000/- |
| 2 | ಎಲೆಕ್ಟ್ರಿಕಲ್ ಮೋಟಾರ್, ಸ್ಟಾರ್ಟರ್, ವಿ ಬೆಲ್ಟ್ ಇತರೆ ಸಲಕರಣೆಗಳು | ರೂ.20,000/- | ರೂ.10,000/- | ರೂ.18,000/- |
| 3 | 400 ಹುಕ್ಸ್ ಜಕಾರ್ಡ್ ಸೆಟ್(ಡಿಸೈನ್ ಸೀರೆ/ಬಟ್ಟೆ ನೇಯ್ಗೆ ಮಾಡಲು) | ರೂ.1,00,000/- | ರೂ.50,000/- | ರೂ.90,000/- |
| | ಒಟ್ಟು | ರೂ.3,00,000/- | ರೂ.1,50,000/- | ರೂ.2,70,000/- |

- ಘಟಕ ವೆಚ್ಚ ಪ್ರತಿ ಮಗ್ಗಕ್ಕೆ ರೂ.1,50,000/- ಗಳಂತೆ 2 ಮಗ್ಗಗಳಿಗೆ ರೂ.3,00,000/-
- ಸರ್ಕಾರದ ಗರಿಷ್ಟ ಸಹಾಯಧನ ಸಾಮಾನ್ಯ ಫಲಾನುಭವಿಗಳಿಗೆ (ಶೇ.50 ರಂತೆ) ರೂ.1,50,000/- ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಗಳಿಗೆ (ಶೇ.90 ರಂತೆ) ರೂ.2,70,000/-ಗಳನ್ನು ನೀಡಲಾಗುವುದು. ಉಳಿಕೆ ಮೊತ್ತವನ್ನು ಭರಿಸಲು ಫಲಾನುಭವಿಗೆ ಅವಕಾಶವಿರಬೇಕು.
- ನೇಕಾರ ಫಲಾನುಭವಿಯು ಶೇ.50 ರಷ್ಟು ವಂತಿಕೆಯನ್ನು ಸಾಲದ ರೂಪದಲ್ಲಿ ಹಣಕಾಸು ಸಂಸ್ಥೆ/ಬ್ಯಾಂಕ್‌ಗಳಿಂದ/ಇತರೆ ಯೋಜನೆಗಳಡಿ ಕಡ್ಡಾಯವಾಗಿ ಪಡೆಯತಕ್ಕದ್ದು.
- ವಿದ್ಯುತ್‌ಮಗ್ಗಗಳಿಗೆ ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾಗಿ ಬೇಕಾದ ಮೊತ್ತವನ್ನು ನೇಕಾರ ಫಲಾನುಭವಿಯು ನೇರವಾಗಿ ಭರಿಸಲು ಅವಕಾಶವಿರಬೇಕು.

2. ಅರ್ಹತೆಗಳು

- ವಿದ್ಯುತ್‌ಮಗ್ಗ ನೇಯ್ಗೆ ತರಬೇತಿ/ತಿಳುವಳಿಕೆ ಹೊಂದಿರಬೇಕು.
- ಕೈಗಾರಿಕೆ/ಉದ್ದಿಮೆಗೆ ಬೇಕಾದ ವಿದ್ಯುತ್‌ಶಕ್ತಿ (ಗರಿಷ್ಟ 2 ಹೆಚ್.ಪಿ) ಸಂಪರ್ಕವನ್ನು ಹೊಂದಿರಬೇಕು.
- ಎರಡು ವಿದ್ಯುತ್‌ಮಗ್ಗಗಳನ್ನು ಸ್ಥಾಪಿಸುವಷ್ಟು ಜಾಗ/ಸ್ಥಳಾವಕಾಶ ಹೊಂದಿರಬೇಕು.
- ಫಲಾನುಭವಿಗೆ ಗರಿಷ್ಠ 02 ಮಗ್ಗಗಳಿಗೆ ಸಹಾಯಧನ ನೀಡಲಾಗುವುದು.

--3

## 3. ಫಲಾನುಭವಿಗಳಿಂದ ಪಡೆಯಬೇಕಾದ ದಾಖಲಾತಿಗಳು

- ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ.
- ಇತ್ತೀಚಿನ ಭಾವಚಿತ್ರ
- ವಿದ್ಯುತ್‌ಮಗ್ಗಗಳನ್ನು ಸ್ಥಾಪಿಸಲು ಹೊಂದಿರುವ ಸ್ವಂತ/ಬಾಡಿಗೆ ಸ್ಥಳದ ದಾಖಲಾತಿ.
- ವಿದ್ಯುತ್ ಸಂಪರ್ಕ ಹೊಂದಿರುವ ದಾಖಲಾತಿ ಆರ್.ಆರ್.ನಂ
- ಬ್ಯಾಂಕ್/ಹಣಕಾಸಿನ ಸಂಸ್ಥೆಗಳಿಂದ ಸಾಲ ಮಂಜೂರಾತಿ ಒಪ್ಪಿಗೆ ಪತ್ರ
- ಎಸ್.ಸಿ/ಎಸ್.ಟಿ ಫಲಾನುಭವಿ ಆಗಿದ್ದಲ್ಲಿ ಜಾತಿ ಪ್ರಮಾಣ ಪತ್ರದ ಪ್ರತಿ.
- ಕರಾರು ಒಪ್ಪಿಗೆ ಪತ್ರ ರೂ.15/- ಛಾಪ ಕಾಗದದಲ್ಲಿ ಸಿದ್ದಪಡಿಸುವುದು.

## 4. ಅನುಷ್ಠಾನ

- ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು, ಅಸಂಘಟಿತ ವಲಯದ ಫಲಾನುಭವಿಗಳನ್ನು ನಿಯಮಾನುಸಾರ ಆಯ್ಕೆ ಮಾಡಿ ಫಲಾನುಭವಿಗಳ ಅವಶ್ಯಕತೆಗೆ ತಕ್ಕಂತೆ ಬ್ಯಾಂಕಿನಿಂದ ಸಾಲದ ನೆರವು ಪಡೆದು ಅನುಮೋದನೆಯೊಂದಿಗೆ ಚೆಕ್‌ಲಿಸ್ಟ್ ಪ್ರಕಾರ ಪ್ರಸ್ತಾವನೆಗಳನ್ನು ಮಂಜೂರಾತಿಗಾಗಿ ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಯೋಜನೆಯಡಿ ಪ್ರಯೋಜನ ಪಡೆದ ಫಲಾನುಭವಿಗಳು ವಿದ್ಯುತ್‌ಮಗ್ಗಗಳನ್ನು ಕನಿಷ್ಠ 05 ವರ್ಷಗಳವರೆಗೆ ಯಾರಿಗೂ ಮಾರಾಟ/ಪರಾಭಾರೆ ಮಾಡಬಾರದು. ಈ ಬಗ್ಗೆ ಫಲಾನುಭವಿಗಳಿಂದ ಮುಚ್ಚಳಿಕೆ ಪತ್ರವನ್ನು ಕಡ್ಡಾಯವಾಗಿ ಪಡೆದು ಜಿಲ್ಲಾ ಕಛೇರಿಯಲ್ಲಿ ನಿರ್ವಹಿಸತಕ್ಕದ್ದು.

(ಎಸ್.ಜಗದೀಶ್),
ಪೀಠಾಧಿಕಾರಿ(ಜವಳಿ)(ಪ್ರಭಾರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

Office of the Co... For Textiles
No. 138
Date 25/5/16
Bangalore

**ಕರ್ನಾಟಕ ಸರ್ಕಾರ**

ವಿಷಯ: ನೇಕಾರರಿಗೆ 02 ವಿದ್ಯುತ್ ಮಗ್ಗಗಳನ್ನು ಒದಗಿಸುವ ಯೋಜನೆಯ ಕಾರ್ಯಕ್ರಮ ಅನುಷ್ಠಾನಕ್ಕೆ ಅನುಸರಿಸುವ ಮಾರ್ಗಸೂಚಿಯನ್ನು ತಿದ್ದುಪಡಿ ಮಾಡುವ ಬಗ್ಗೆ.

ಉಲ್ಲೇಖ: ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ಜವಳಿ/ಜತ-3/2015-16/27, ದಿನಾಂಕ:14-04-2016

**********

ಸರ್ಕಾರದ ಮಾರ್ಗಸೂಚಿ ಸಂಖ್ಯೆ: ವಾಕೈ 58 ಜಕೈಯೋ 2014 ಬೆಂಗಳೂರು, ದಿನಾಂಕ: 22.11.2014 ರಲ್ಲಿ ರಾಜ್ಯದ ನೇಕಾರರ ಆದಾಯವನ್ನು ಹೆಚ್ಚಿಸಲು ನೇಕಾರರಿಗೆ ತಲಾ 02 ವಿದ್ಯುತ್ ಮಗ್ಗವನ್ನು ಒದಗಿಸುವ ಯೋಜನೆಯನ್ನು ಜಾರಿಗೊಳಿಸಲಾಗಿದ್ದು ಸದರಿ ಮಾರ್ಗಸೂಚಿಯಲ್ಲಿ ಘಟಕ ವೆಚ್ಚವನ್ನು ರೂ.2.00 ಲಕ್ಷಗಳಿಂದ ರೂ.3.00 ಲಕ್ಷಗಳಿಗೆ ಹೆಚ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

ಪ್ರಸ್ತುತ ಜಾರಿ ಇರುವ ಮಾರ್ಗಸೂಚಿಯಂತೆ, 02 ವಿದ್ಯುತ್ ಮಗ್ಗಗಳ ಸರಬರಾಜು ಯೋಜನೆಯಡಿ ಸರ್ಕಾರದಿಂದ ಸಾಮಾನ್ಯವರ್ಗ, ಪರಿಶಿಷ್ಟಜಾತಿ/ಪರಿಶಿಷ್ಟಪಂಗಡದ ಫಲಾನುಭವಿಗಳಿಗೆ ನೀಡುತ್ತಿರುವ ಸಹಾಯ ಧನದ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ವಿವರ | ಘಟಕ ವೆಚ್ಚ (02 ಮಗ್ಗಗಳಿಗೆ) | ಸಾಮಾನ್ಯ ಫಲಾನುಭವಿಗಳಿಗೆ ಸಹಾಯ ಧನ ಶೇ.50 | ಪ.ಜಾ/ಪ.ಪಂ ಫಲಾನುಭವಿಗಳಿಗೆ ಸಹಾಯ ಧನ ಶೇ.90 |
|---|---|---|---|---|
| 1 | ಸಾಮಾನ್ಯ ವಿದ್ಯುತ್ ಮಗ್ಗ 54" ಅಗಲ 2X1 ಡ್ರಾಪ್ ಬಾಕ್ಸ್ ಹಾಗೂ ಸಲಕರಣೆಗಳೊಂದಿಗೆ. | ರೂ.1,80,000 | ರೂ.90,000 | ರೂ.1.62.000 |
| 2 | ಎಲೆಕ್ಟ್ರಿಕಲ್ ಮೋಟಾರ್, ಸ್ಟಾಟರ್ ವಿಥ್ ಬೆಲ್ಟ್ ಇತರೆ ಸಲಕರಣೆಗಳು | ರೂ.20,000 | ರೂ.10,000 | ರೂ.18,000 |
| 3 | 400ಹುಕ್ಸ್ ಜಕಾರ್ಡ್ ಸೆಟ್ (ಡಿಸೈನ್ ಸೀರೆ/ ಬಟ್ಟೆನೇಯ್ಗೆ ಮಾಡಲು) | ರೂ.1,00,000 | ರೂ.50,000 | ರೂ.90,000 |
| | ಒಟ್ಟು | ರೂ.3,00,000 | ರೂ.1,50,000 | ರೂ.2,70,000 |

ಉಲ್ಲೇಖದ ಪತ್ರದಲ್ಲಿ ಜವಳಿ ಅಭಿವೃದ್ಧಿ ಆಯುಕ್ತರು, ನೇಕಾರರ ವಿಶೇಷ ಪ್ಯಾಕೇಜ್/ವಿಶೇಷ ಘಟಕ/ಗಿರಿಜನ ಉಪಯೋಜನೆಗಳ ಅಡಿ ವಿದ್ಯುತ್ ಮಗ್ಗ ಘಟಕಗಳ ಸ್ಥಾಪನೆಯ ಬಗ್ಗೆ ಪ್ರಸ್ತುತ ಜಾರಿ ಇರುವ ಮಾರ್ಗಸೂಚಿಯ ಘಟಕ ವೆಚ್ಚದಲ್ಲಿ ಬದಲಾವಣೆಯನ್ನು ಮಾಡಲು ಹಾಗೂ ನೇಕಾರರ ಅನುಕೂಲಕ್ಕಾಗಿ ಜಕಾರ್ಡ್ ಬದಲಾಗಿ 400 ಹುಕ್ಸ್ ಜಕಾರ್ಡ್ ಸೆಟ್ ಅಥವಾ ಡಾಬಿಯನ್ನು ಖರೀದಿಸಲು ಅವಕಾಶ ಕಲ್ಪಿಸಿ ದಿನಾಂಕ: 22-11-2014ರ ಮಾರ್ಗಸೂಚಿಯನ್ನು ಮಾರ್ಪಡಿಸಿ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸುವಂತೆ ಕೋರಿರುತ್ತಾರೆ.

-2

**ಪರಿಷ್ಕೃತ ಮಾರ್ಗಸೂಚಿ ಸಂಖ್ಯೆ: ವಾಕೈ 84 ಜಕೈಯೋ 2016, ಬೆಂಗಳೂರು ದಿನಾಂಕ:19.05.2016**

ಜವಳಿ ಅಭಿವೃದ್ಧಿ ಆಯುಕ್ತರ ಕೋರಿಕೆಯಂತೆ, ಹಿಂದಿನ ಮಾರ್ಗಸೂಚಿಯಂತೆ ವಾಕೈ 58 ಜಕೈಯೋ 2014, ದಿನಾಂ:22-11-2014 ಅನ್ನು ಭಾಗಶಃ ಮಾರ್ಪಡಿಸಿ 02 ವಿದ್ಯುತ್ ಮಗ್ಗ ಯೋಜನೆಯಡಿ ಜಕಾರ್ಡ್ ಬದಲಿಗೆ ಡಾಬಿಯನ್ನು ಖರೀದಿಸಲು ಅವಕಾಶ ಕಲ್ಪಿಸಿದ್ದು, ಘಟಕ ವೆಚ್ಚವನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

| ಕ್ರ. ಸಂ | ವಿವರ | ಘಟಕ ವೆಚ್ಚ (02 ಮಗ್ಗಗಳಿಗೆ) | ಸಾಮಾನ್ಯ ಫಲಾನುಭವಿಗಳಿಗೆ ಸಹಾಯ ಧನ ಶೇ.50 | ಪ.ಜಾ/ಪ.ಪಂ ಫಲಾನುಭವಿಗಳಿಗೆ ಸಹಾಯ ಧನ ಶೇ.90 |
|---|---|---|---|---|
| 1 | ಸಾಮಾನ್ಯ ವಿದ್ಯುತ್ ಮಗ್ಗ 54" ಅಗಲ 2X1 ಡ್ರಾಪ್ ಬಾಕ್ಸ್ ಹಾಗೂ ಸಲಕರಣೆಗಳೊಂದಿಗೆ. | ರೂ.1,80,000 | ರೂ.90,000 | ರೂ.1.62.000 |
| 2 | ಎಲೆಕ್ಟ್ರಿಕಲ್ ಮೋಟಾರ್, ಸ್ಟಾರ್ಟರ್ ವಿಥ್ ಬೆಲ್ಟ್ ಇತರೆ ಸಲಕರಣೆಗಳು | ರೂ.20,000 | ರೂ.10,000 | ರೂ.18,000 |
| 3 | 400ಹುಕ್ಸ್ ಜಕಾರ್ಡ್ ಸೆಟ್/ 40 ಕೋಲಿನ 02 ಸೆಟ್ ಸ್ಟೀಲ್ ಡಾಬಿ (ಡಿಸೈನ್ ಸೀರೆ/ ಬಟ್ಟೆನೇಯ್ಗೆ ಮಾಡಲು) | ರೂ.1,10,000 | ರೂ.50,000 | ರೂ.90,000 |
| | ಒಟ್ಟು | ರೂ.3,10,000 | ರೂ.1,50,000 | ರೂ.2,70,000 |

ಮಾರ್ಗಸೂಚಿ ಸಂಖ್ಯೆ:ವಾಕೈ 58 ಜಕೈಯೋ 2014, ದಿನಾಂಕ:22-11-2014ರಲ್ಲಿನ ಉಳಿದ ಮಾರ್ಗಸೂಚಿಯಲ್ಲಿರುವ ಷರತ್ತುಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

(ಕೆ.ಬೋರಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ರಾಜ್ಯ ಸಂಕಲನಕಾರರು, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.

ಪ್ರತಿ:

1. ಮಹಾಲೇಖಪಾಲರು, (ಲೆಕ್ಕ ಪತ್ರ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿ-ವೆಚ್ಚ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿ. 6ನೇ ಮಹಡಿ, , ಒಕ್ಕಲಿಗರ ಭವನ, ಕಿತ್ತೂರು ರಾಣಿ ಚೆನ್ನಮ್ಮ ವೃತ್ತ, ಬೆಂಗಳೂರು-560 027
7. ವ್ಯವಸ್ಥಾಪಕ ನಿರ್ದೇಶಕರು, ಕನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿ., ಪ್ರಿಯದರ್ಶಿನಿ ನೇಕಾರರ ಭವನ, ಹಲಸೂರು, ಬೆಂಗಳೂರು.
8. ಹೆಚ್ಚುವರಿ ಪ್ರತಿಗಳು.